ನಿ.330

# ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಮರಿತಿಬ್ಬೇಗೌಡ ಇವರು ನಿಯಮ 330 ರಡಿಯಲ್ಲಿ ನೀಡಿರುವ ಸೂಚನಾ ಪತ್ರಕ್ಕೆ ಮಾನ್ಯ ಮುಖ್ಯಮಂತ್ರಿಯವರ ಹೇಳಿಕೆ.

**ಪ್ರಶ್ನೆ:-**

ಕರ್ನಾಟಕ ಆದಾಯ ತೆರಿಗೆ ಗೃಹ ನಿರ್ಮಾಣ ಸಹಕಾರ ಸಂಘ ಎಂಬ ಹೆಸರಿನಲ್ಲಿ ಬೆಂಗಳೂರಿನ ಹಲವು ಪ್ರತಿಷ್ಠಿತ ಬಡಾವಣೆಗಳಲ್ಲಿ ಖಾಲಿಯಿರುವ ಜಾಗವನ್ನು ಗುರ್ತಿಸಿ ಬದಲಿ ಜಾಗದ ಹೆಸರಿನಲ್ಲಿ ಅಕ್ರಮವಾಗಿ ಖಾಲಿ ಜಾಗ ಮತ್ತು ನಿವೇಶನಗಳನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ಹಂಚಿಕೆ ಮಾಡಿಸಿಕೊಳ್ಳುತ್ತಿರುವ ವಿಷಯವು ಹಲವು ಟಿ.ವಿ.ವಾಹಿನಿಗಳಲ್ಲಿ ಪ್ರಸಾರವಾಗಿದೆ. ಸದರಿ ಸಹಕಾರ ಸಂಘದ ಹೆಸರಿನಲ್ಲಿ ವ್ಯಕ್ತಿಯೊಬ್ಬರು ಬಿಡಿಎ ನಲ್ಲಿರುವ ಭ್ರಷ್ಟ ಅಧಿಕಾರಿಗಳ ನೆರವಿನಿಂದ ಬೇರೆ ಬೇರೆಯವರಿಗೆ ಹಂಚಿಕೆಯಾಗಿರುವ ಖಾಲಿ ನಿವೇಶನ ಮತ್ತು ಜಾಗಗಳನ್ನು ಅಕ್ರಮವಾಗಿ ಹಂಚಿಕೆ ಮಾಡಿ ವಶಪಡಿಸಿಕೊಂಡು ಕಾಂಪೌಂಡ್ ನಿರ್ಮಿಸಿ ಮೂಲ ನಿವೇಶನದಾರರಿಗೆ ಮೋಸ ಮಾಡಿರುವುದು ಸಹ ಟಿ.ವಿ.ವಾಹಿನಿಯಲ್ಲಿ ಪ್ರಸಾರವಾಗಿದೆ. ಈ ಸಂಘದ ಹೆಸರಿನಲ್ಲಿ ಅಕ್ರಮವಾಗಿ ಖಾಲಿ ಜಾಗ ಮತ್ತು ನಿವೇಶನಗಳನ್ನು ಕಬಳಿಸುತ್ತಿರುವುದಾಗಿ ತಿಳಿದ್ದರೂ ಬಿಡಿಎ ನಲ್ಲಿರುವ ಕೆಲವು ಅಧಿಕಾರಿಗಳು ಶಾಮೀಲಾಗಿ ಬೆಂಗಳೂರು ನಗರದ ಉತ್ತರಹಳ್ಳಿಯ ಸರ್ವೆ ನಂ.89 ರಲ್ಲಿನ ಖಾಲಿ ಜಾಗವನ್ನು ಅಕ್ರಮವಾಗಿ ಹಂಚಿಕೆ ಮಾಡುತ್ತಿರುವುದಾಗಿ ತಿಳಿದು ಬಂದಿದೆ.

ಆದುದರಿಂದ, ಕರ್ನಾಟಕ ಆದಾಯ ತೆರಿಗೆ ಗೃಹ ನಿರ್ಮಾಣ ಸಹಕಾರ ಸಂಘ ಎಂಬ ಹೆಸರಿನಲ್ಲಿ ಉತ್ತರಹಳ್ಳಿ ಸರ್ವೆ ನಂ.89 ರಲ್ಲಿ ಖಾಲಿ ಜಾಗ ಹಂಚಿಕೆ ಮಾಡುತ್ತಿರುವುದನ್ನು ರದ್ದುಗೊಳಿಸಬೇಕು. ಇದುವರೆವಿಗೂ ಈ ಸಹಕಾರ ಸಂಘಕ್ಕೆ ಅಕ್ರಮವಾಗಿ ಹಂಚಿಕೆ ಮಾಡಿರುವ ಎಲ್ಲಾ ನಿವೇಶನಗಳನ್ನು ವಶಪಡಿಸಿಕೊಂಡು, ಇದರಲ್ಲಿ ಶಾಮೀಲಾಗಿರುವ ಭ್ರಷ್ಟ ಅಧಿಕಾರಿಗಳ ಮೇಲೆ ಶಿಸ್ತು ಕ್ರಮಕೈಗೊಳ್ಳಬೇಕು. ಈ ಸಹಕಾರ ಸಂಘಕ್ಕೆ ಸಂಬಂಧವೇ ಇಲ್ಲದ ಸಂಘದ ಹೆಸರಿನಲ್ಲಿ ದೌರ್ಜನ್ಯ ನಡೆಸುತ್ತಿರುವ ವ್ಯಕ್ತಿಯ ಮೇಲೆ ಕ್ರಿಮಿನಲ್ ಕೇಸ್ ದಾಖಲಿಸಿ ಕ್ರಮಕೈಗೊಳ್ಳಬೇಕು ಹಾಗೂ ಇದುವರೆವಿಗೆ ಈ ಸಹಕಾರ ಸಂಘಕ್ಕೆ ಅಕ್ರಮವಾಗಿ ಹಂಚಿಕೆಯಾಗಿರುವ ಖಾಲಿ ಜಾಗ ಮತ್ತು ನಿವೇಶನಗಳ ಬಗ್ಗೆ ಎಸ್.ಐ.ಟಿ. ತನಿಖೆ ವಹಿಸಬೇಕೆಂಬ ಬಗ್ಗೆ ಸದನದಲ್ಲಿ ಪ್ರಸ್ತಾಪಿಸ ಬಯಸುತ್ತೇನೆ.

**ಉತ್ತರ:-**

ಮೈಸೂರು ಆದಾಯ ತೆರಿಗೆ ಇಲಾಖೆ ಗೃಹ ನಿರ್ಮಾಣ ಸಹಕಾರ ಸಂಘದವರು ಮಾಳಗಾಳ ಗ್ರಾಮದ ಸರ್ವೆ ನಂ.5 ಮತ್ತು 10 ಹಾಗೂ ನಾಗರಭಾವಿ ಗ್ರಾಮದ ಸರ್ವೆ ನಂ.73 ಮತ್ತು 94 ರಲ್ಲಿ ಖರೀದಿಸಿದ್ದ, 32 ಎಕರೆ 09 ಗುಂಟೆ ಜಮೀನನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ನಾಗರಭಾವಿ ಬಡಾವಣೆಗಾಗಿ ಭೂಸ್ವಾಧೀನಪಡಿಸಿಕೊಂಡಿದ್ದರ ಹಿನ್ನೆಲೆಯಲ್ಲಿ, ಸರ್ಕಾರದ ಆದೇಶ ಸಂಖ್ಯೆ:ವನಇ/587/ಎಂ.ಎನ್.ಎಕ್ಸ್/87 ದಿನಾಂಕ:06.01.1989 ರನ್ವಯ ಹಾಗೂ ಪ್ರಾಧಿಕಾರದ ಸಭೆಯ ದಿನಾಂಕ:27.09.2014 ಮುಂದೂಡಲಾದ ವಿಷಯ ಸಂಖ್ಯೆ:56/2014 ರ ತೀರ್ಮಾನದಂತೆ, ಕರ್ನಾಟಕ ಆದಾಯ ತೆರಿಗೆ ಇಲಾಖೆ ಗೃಹ ನಿರ್ಮಾಣ ಸಹಕಾರ ಸಂಘದವರ ಪರವಾಗಿ 13 ಎಕರೆ ಜಮೀನನ್ನು ಪ್ರಾಧಿಕಾರವು ನಿರ್ಧರಿಸುವ ದರವನ್ನು ಪಾವತಿಸುವ ಷರತ್ತಿಗೊಳಪಡಿಸಿ, ಸಗಟು ಹಂಚಿಕೆ ಮಾಡಲು ನಿರ್ಣಯಿಸಲಾಗಿತ್ತು. ಪ್ರಸ್ತಾಪಿತ ಜಮೀನು ಲಭ್ಯವಿಲ್ಲದಿದ್ದಲ್ಲಿ ಸಮಾನಾಂತರ ಬಡಾವಣೆಗಳಲ್ಲಿ ಬದಲಿ ಜಮೀನನ್ನು ಗುರ್ತಿಸಿ ಹಂಚಿಕೆ ಮಾಡಲು ತೀರ್ಮಾನಿಸಲಾಗಿರುತ್ತದೆ.

ಸರ್ಕಾರದ ಆದೇಶದಂತೆ ಮತ್ತು ಪ್ರಾಧಿಕಾರದ ಸಭೆಯ ತೀರ್ಮಾನದಂತೆ ಕರ್ನಾಟಕ ಆದಾಯ ತೆರಿಗೆ ಇಲಾಖೆ ಗೃಹ ನಿರ್ಮಾಣ ಸಹಕಾರ ಸಂಘದ ಪರವಾಗಿ ಕಾರ್ಯದರ್ಶಿಯವರಿಗೆ ಪ್ರಾಧಿಕಾರದಿಂದ ಈವರೆವಿಗೂ ವಿವಿಧ ಬಡಾವಣೆಗಳಲ್ಲಿ ಒಟ್ಟು 13 ಎಕರೆ ಜಮೀನನ್ನು ಹಂಚಿಕೆ ಮಾಡಿ ಶುದ್ಧಕ್ರಯಪತ್ರಗಳನ್ನು ನೋಂದಾಯಿಸಿಕೊಟ್ಟು ಸ್ವಾಧೀನ ಪತ್ರಗಳನ್ನು ದಿನಾಂಕ:07.07.2015 ರಿಂದ 15.05.2019 ರ ಅವಧಿಯಲ್ಲಿ ನೀಡಲಾಗಿರುತ್ತದೆ.

ಬೆಂಗಳೂರು ದಕ್ಷಿಣ ತಾಲ್ಲೂಕು, ಉತ್ತರಹಳ್ಳಿ ಹೋಬಳಿ, ಉತ್ತರಹಳ್ಳಿ ಗ್ರಾಮದ ಸರ್ವೆ ನಂ.89 ರಲ್ಲಿನ 02 ಎಕರೆ 21 ಗುಂಟೆ ಜಮೀನನ್ನು ಬನಶಂಕರಿ 5ನೇ ಹಂತದ ಬಡಾವಣೆ ರಚಿಸುವ ಸಲುವಾಗಿ ದಿನಾಂಕ:29.12.1988 ರಂತೆ ಭೂಸ್ವಾಧೀನ ಪಡಿಸಿಕೊಳ್ಳಲಾಗಿರುತ್ತದೆ. ಸದರಿ ಜಮೀನು ಹಾಲಿ ಭೌತಿಕವಾಗಿ ಖಾಲಿಯಿದ್ದುದರಿಂದ ರಸ್ತೆ ನಿರ್ಮಾಣವಾಗಿರುವ ಜಾಗವನ್ನು ಹೊರತುಪಡಿಸಿ, ಉಳಿದ 01 ಎಕರೆ 20 ಗುಂಟೆ ಜಮೀನನ್ನು ಕರ್ನಾಟಕ ಆದಾಯ ತೆರಿಗೆ ಇಲಾಖೆ ಗೃಹ ನಿರ್ಮಾಣ ಸಹಕಾರ ಸಂಘಕ್ಕೆ ಬದಲಿ ಜಾಗವನ್ನಾಗಿ ಹಂಚಿಕೆ ಮಾಡುವ ಬಗ್ಗೆ ಜಾಗವನ್ನು ಗುರ್ತಿಸಿಕೊಂಡಿದ್ದು, ಪ್ರಸ್ತುತ ಹಾಲಿ ಸ್ಥಳದಲ್ಲಿ ಈ ಜಮೀನು ಭೌತಿಕವಾಗಿ ಖಾಲಿಯಿರುತ್ತದೆ.

ಬೆಂಗಳೂರು ದಕ್ಷಿಣ ತಾಲ್ಲೂಕು, ಉತ್ತರಹಳ್ಳಿ ಹೋಬಳಿ, ಉತ್ತರಹಳ್ಳಿ ಗ್ರಾಮದ ಸರ್ವೆ ನಂ.89 ಬನಶಂಕರಿ 5ನೇ ಹಂತ ಬಡಾವಣೆಯ 01 ಎಕರೆ 20 ಗುಂಟೆ ಪ್ರದೇಶವು ಆರ್.ಎಂ.ಪಿ-2015 ರಂತೆ ಪ್ರಶ್ನಿತ ಪ್ರದೇಶವು ವಸತಿ (ಮುಖ್ಯ) ಉಪಯೋಗಕ್ಕಾಗಿ ವರ್ಗೀಕರಿಸಿದೆ.

ಮುಂದುವರೆದು, ಬೆಂಗಳೂರು ನಗರ ಉತ್ತರಹಳ್ಳಿ ಗ್ರಾಮದ ಸರ್ವೆ ನಂ.89 ರಲ್ಲಿನ 01 ಎಕರೆ 20 ಗುಂಟೆ ಜಮೀನನ್ನು ಬದಲಿ ಜಾಗವನ್ನಾಗಿ ಹಂಚಿಕೆ ಮಾಡುವ ಬಗ್ಗೆ ಸಂಘದವರು ಪ್ರಾಧಿಕಾರಕ್ಕೆ ಮನವಿ ಮಾಡಿಕೊಂಡಿರುತ್ತಾರೆ. ಸದರಿ ಮನವಿಯು ಪ್ರಾಧಿಕಾರದಲ್ಲಿ ಪರಿಶೀಲಿನೆಯಲ್ಲಿರುವುದರಿಂದ ಹಾಗೂ ಈ ವಿಷಯದಲ್ಲಿ ಯಾವುದೇ ಅಂತಿಮ ನಿರ್ಣಯವಾಗದೇ ಇರುವುದರಿಂದ ಈ ಹಂತದಲ್ಲಿ ಎಸ್.ಐ.ಟಿ. ತನಿಖೆಗೆ ವಹಿಸುವ ಅಗತ್ಯತೆ ಕಂಡುಬರುವುದಿಲ್ಲ.

---

**ನಅಇ 56 ಬೆಂಅಸೇ 2021**

(ಬಿ.ಎಸ್. ಯಡಿಯೂರಪ್ಪ)
ಮುಖ್ಯಮಂತ್ರಿಗಳು